ಬೇಂದ್ರೆಯವರು, ಗೋಕಾಕ್‌ರವರು ಮತ್ತು ಗಿರೀಶ್ ಕಾರ್ನಾಡ್‌ರವರು. ಮತ್ತೆ ಸಂಗೀತದಲ್ಲಿ ಮನ್‌ಸೂರ್‌ರವರು, ರಾಜಗುರು ಅವರು ಮತ್ತು ಗಂಗೂಬಾಯಿ ಹಾನಗಲ್‌ರವರು. ಮೊಟ್ಟಮೊದಲಿಗೆ ಚಿತ್ರಕಲಾ ಶಾಲೆಯನ್ನು ಪ್ರಾರಂಭ ಮಾಡಿದವರು ಡಿ.ವಿ.ಹಾಲಬಾವಿಯವರು. ಇಂಥ ಪ್ರತಿಭಾವಂತರು ಇರುವ ಒಂದು ನಗರ. ನಮ್ಮಲ್ಲಿ ಜಾನಪದ ಸಾಹಿತಿಗಳು ಅನೇಕ ಜನರು ಇದ್ದಾರೆ. ಆ ಸಮುಚ್ಚಯ ಇವತ್ತು ಏನಿದೆ, ಅಲ್ಲಿ ಆರ್ಟ್ ಗ್ಯಾಲರಿ ಎನ್ನುವುದು ಇಲ್ಲ. ಇಲ್ಲಿ ಹೇಗೆ ವೆಂಕಟಪ್ಪ ಆರ್ಟ್ ಗ್ಯಾಲರಿ ಎಂದು ಇದೆಯೋ ಅದರಂತೆ ನಮ್ಮಲ್ಲೂ ಡಿ.ವಿ.ಹಾಲಬಾಯಿಯವರ ಆರ್ಟ್ ಗ್ಯಾಲರಿ ಆಗಬೇಕು. ನಮ್ಮಲ್ಲಿ ಕನ್ನಡ ಪುಸ್ತಕ ಮಾರಾಟದ ಕೇಂದ್ರವೂ ಸಹಾ ಬೇಕಾಗಿದೆ. ಕಛೇರಿಯೂ ಬೇಕಾಗಿದೆ. ಆ ದೃಷ್ಟಿಯಿಂದ ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಹಿಂದೆ ಲೀಲಾದೇವಿ ಆರ್.ಪ್ರಸಾದ್‌ರವರು ಮಂತ್ರಿಗಳಾಗಿದ್ದಾಗ ಇದನ್ನು ಒಪ್ಪಿಕೊಂಡು ಆಶ್ವಾಸನೆಯನ್ನು ಕೊಟ್ಟಿದ್ದು ಇದೆ. ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ, ಧಾರವಾಡ ಸಾಂಸ್ಕೃತಿಕವಾಗಿ ದೊಡ್ಡ ನಗರ. ಅಲ್ಲಿ ಕಲಾಭವನವನ್ನು ಸ್ಥಾಪನೆ ಮಾಡಬೇಕು ಅದರ ಬಗ್ಗೆ ಪರಿಶೀಲನೆ ಮಾಡಿ ಸಹಾಯ ಮಾಡಬೇಕೆಂದು ಮತ್ತೊಮ್ಮೆ ನಾನು ಸನ್ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಮೂಲತಃ ಆ ಜಾಗದ ಬಗ್ಗೆ ನಾವು ಬಹಳಷ್ಟು ಸಮುಚ್ಚಯಗಳು ಇದಕ್ಕಾಗಿ ಧಾರವಾಡದಲ್ಲಿ ನಾವು ಮಾಡುತ್ತಿರುವುದರಲ್ಲಿ ಬೇರೆ ಜಿಲ್ಲೆಗಳಿಗೆ ನಾವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ನಾವು ಅದಕ್ಕೆ ಹೋಲಿಸಿ ನೋಡಿದರೆ ಧಾರವಾಡಕ್ಕೆ ನಾವು ಹೆಚ್ಚು ಒತ್ತು ಕೊಟ್ಟಿರುವ ಬಗ್ಗೆ ನಾನು ಈಗಾಗಲೇ ತಮಗೆ ಹೇಳಿದ್ದೇನೆ. ಈಗ ನಾವು ಕಛೇರಿಯನ್ನು ಮಾಡಬೇಕಾಗಿರುವುದರಿಂದ ಹೆಚ್ಚಿನ ಆದ್ಯತೆಯ ಮೇರೆಗೆ ಕಛೇರಿಯನ್ನು ಅಲ್ಲಿ ಸ್ಥಾಪನೆ ಮಾಡುವುದರ ಜೊತೆಗೆ ನಾವು ಅದನ್ನು ಪರಿಶೀಲನೆ ಮಾಡುತ್ತೇವೆ ಎನ್ನುವ ವಿಚಾರವನ್ನು ನಾನು ಈಗಾಗಲೇ ಹೇಳಿದ್ದೇನೆ.

ಗುಂಡ್ಲುಪೇಟೆಯಲ್ಲಿ ಆಸ್ಪತ್ರೆ ವಿಸ್ತರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 18(609)

ಸದಸ್ಯರ ಹೆಸರು: ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್.(ಗುಂಡ್ಲುಪೇಟೆ)

ಉತ್ತರಿಸುವ ಸಚಿವರು: ಡಾ॥ಎ.ಬಿ.ಮಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ಗುಂಡ್ಲುಪೇಟೆ ಮತ್ತು ಕಬ್ಬಹಳ್ಳಿ ಗ್ರಾಮದಲ್ಲಿ KHSDP (Karnataka Health Systems Development Project) ಯೋಜನೆ ಅಡಿಯಲ್ಲಿ ನಿರ್ಮಿಸುತ್ತಿರುವ ಆಸ್ಪತ್ರೆ ವಿಸ್ತರಣಾ ಕೆಲಸ ಮುಗಿಸಲು ಗಡುವುದು ನೀಡಲಾಗಿದೆಯೇ; ನೀಡಲಾಗಿದ್ದರೆ ಎಂದು ಪೂರ್ಣಗೊಳಿಸಲಾಗುವುದು?

ಆ) ಗುಂಡ್ಲುಪೇಟೆಯಲ್ಲಿ ನಿರ್ಮಿಸುತ್ತಿರುವ ಆಸ್ಪತ್ರೆ ವಿಸ್ತರಣಾ ಕೆಲಸದಲ್ಲಿ ವೈದ್ಯರ ಮತ್ತು ದಾದಿಯರ ವಸತಿಗೃಹಗಳ ನಿರ್ಮಾಣವೂ ಸೇರಿದೆಯೇ;

ಇ) ಸೇರಿದ್ದರೆ, ಅವುಗಳ ನಿರ್ಮಾಣ ಕೆಲಸ ಪ್ರಾರಂಭವಾಗದಿರಲು ಕಾರಣವೇನು?

ಉತ್ತರ

ಅ) ಹೌದು. ಗುಂಡ್ಲುಪೇಟೆ ಹಾಗೂ ಕಬ್ಬಹಳ್ಳಿ ಆಸ್ಪತ್ರೆ ಕಾಮಗಾರಿಗಳಿಗೆ ಕ್ರಮವಾಗಿ ದಿನಾಂಕ:30.9.2000 ಹಾಗೂ ದಿನಾಂಕ: 10.6.2000 ಗಡುವು ನೀಡಲಾಗಿತ್ತು. ಈ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ಗುತ್ತಿಗೆದಾರರಿಂದ ಹಾಗೂ ವಿದ್ಯುತ್ ಸಂಪರ್ಕ ಪಡೆಯುವಲ್ಲಿ ಕೆಪಿಟಿಸಿಎಲ್‌ರಿಂದ ವಿಳಂಬವಾಗಿರುತ್ತದೆ. ಆದಾಗ್ಯೂ ಈ ಎರಡು ಆಸ್ಪತ್ರೆ ಕಾಮಗಾರಿಗಳು ಫೆಬ್ರವರಿ-2002ರ ಅಂತ್ಯಕ್ಕೆ ಪೂರ್ಣಗೊಳ್ಳುತ್ತವೆ.

ಆ) ಹಳೆ ಆಸ್ಪತ್ರೆ ಕಟ್ಟಡವನ್ನು ನವೀಕರಿಸಿ ಅದನ್ನು ವೈದ್ಯರು ಹಾಗೂ ದಾದಿಯರ ವಸತಿಗೃಹವಾಗಿ ಮಾರ್ಪಡಿಸುವ ಪ್ರಸ್ತಾವನೆ ಇತ್ತು ಈ ಹಳೆಯ ಕಟ್ಟಡದಲ್ಲಿ ಆಯುರ್ವೇದ ಆಸ್ಪತ್ರೆಯನ್ನು ಸ್ಥಾಪಿಸಿರುವುದರಿಂದ ಸದರಿ ಕಟ್ಟಡವು ವಸತಿಗೃಹವಾಗಿ ಪರಿವರ್ತಿಸಲು ಲಭ್ಯವಾಗಿಲ್ಲ. ಈಗ ಅನುದಾನದ ಕೊರತೆಯಿಂದ ವಸತಿಗೃಹಗಳ ನಿರ್ಮಾಣ ಕಾರ್ಯವನ್ನು ಸಧ್ಯಕ್ಕೆ ಮುಂದೂಡಲಾಗಿದೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮಾನ್ಯ ಅಧ್ಯಕ್ಷರೇ, ನನ್ನ ಮತಕ್ಷೇತ್ರದ ಗುಂಡ್ಲುಪೇಟೆ ಮತ್ತು ಕಬ್ಬಹಳ್ಳಿಯಲ್ಲಿ ಕೆಹೆಚ್‌ಎಸ್‌ಡಿಪಿಯಿಂದ ಆಸ್ಪತ್ರೆ ವಿಸ್ತರಣಾ ಕಾರ್ಯ ಪ್ರಾರಂಭವಾಗಿ ಸುಮಾರು ಐದು ವರ್ಷವಾಯಿತು. ಇದರ ಗಡುವು ಮುಗಿದು ಎರಡು ವರ್ಷವಾಯಿತು. ಶೇಕಡ 70ರಷ್ಟು ಕೆಲಸ ಕೂಡ ಆಲ್ಲಿ ಪೂರ್ಣವಾಗಿಲ್ಲ. ಆದರೆ ಸರ್ಕಾರದ ಉತ್ತರದಲ್ಲಿ ಫೆಬ್ರವರಿ 2002ರಲ್ಲಿ ಇದನ್ನು ಪೂರ್ಣಗೊಳಿಸಲಾಗುತ್ತದೆಂದು ಹೇಳಿದ್ದಾರೆ. ಅಂದರೆ ಇನ್ನೊಂದು ತಿಂಗಳಲ್ಲಿ ಪೂರ್ಣಗೊಳಿಸುತ್ತೇವೆಂದು ಹೇಳಿ ತಾವು ಉತ್ತರವನ್ನು ಕೊಟ್ಟಿದ್ದೀರಿ. ಈಗ ಅಲ್ಲಿರುವ

ಸ್ಥಿತಿಯಲ್ಲಿ ಇನ್ನೂ ಆರು ತಿಂಗಳಾದರೂ ಕೂಡ ಅದನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನೊಂದು ತಿಂಗಳಲ್ಲಿ ಮುಗಿಸುತ್ತೇವೆ ಎಂದು ಹೇಳಿ ಏಕೆ ಈ ರೀತಿ ಉತ್ತರವನ್ನು ನಿಮ್ಮ ಅಧಿಕಾರಿಗಳು ಸದನಕ್ಕೆ ಕೊಡುತ್ತಾರೋ ಗೊತ್ತಿಲ್ಲ. ಎರಡನೆಯದು, ಅಲ್ಲಿ ವೈದ್ಯರ ಮತ್ತು ದಾದಿಯರ ವಸತಿ ಗೃಹಗಳನ್ನು ನಿರ್ಮಾಣ ಮಾಡತಕ್ಕಂಥದ್ದು ಹಿಂದಿನ ಯೋಜನೆಯಲ್ಲಿ ಮಂಜೂರಾಗಿ ಟೆಂಡರ್ ಕೂಡ ಆಗಿತ್ತು. ಆದರೆ ಅಲ್ಲಿ ಹಳೆಯ ಆಸ್ಪತ್ರೆ ಕಟ್ಟಡದಲ್ಲಿ ಆಯುರ್ವೇದ ಆಸ್ಪತ್ರೆ ಆಗಿದ್ದರಿಂದ ಈಗೇನು ಹೊಸ ಜನರಲ್ ಆಸ್ಪತ್ರೆ ಇದೆ, ಅಲ್ಲಿ ಸಾಕಷ್ಟು ಜಾಗ ಇದೆ. ಅಲ್ಲಿ ವೈದ್ಯರ ಮತ್ತು ದಾದಿಯರ ವಸತಿ ಗೃಹನಿರ್ಮಾಣ ಮಾಡಿ ಎಂದು ನಾನು ಪತ್ರ ವ್ಯವಹಾರವೆಲ್ಲಾ ಮಾಡಿ ಅದನ್ನು ತಮ್ಮ ಗಮನಕ್ಕೂ ತಂದಿದ್ದೆ. ಆದರೆ ಅಲ್ಲಿ ನೀವು ಬೇರೆ ಬೇರೆ ಸ್ಕೀಮ್‌ಗಳಿಗೆ ಹಣವನ್ನು ನೀವು ಬೇರೆ ಬೇರೆ ಕಡೆಗೆ ಹೆಚ್ಚುವರಿಯಾಗಿ ಖರ್ಚು ಮಾಡಿ ಅಲ್ಲಿ ನೀವು ಹಣವನ್ನು ವಿನಿಯೋಗಿಸಿ ನಮ್ಮ ಗುಂಡ್ಲುಪೇಟೆಗೆ ಮಂಜೂರಾದ ಸುಮಾರು 60-70 ಲಕ್ಷ ರೂಪಾಯಿಗಳನ್ನು ಖೋತಾ ಮಾಡತಕ್ಕದ್ದು ಸರಿಯೇ? ನಮ್ಮದು ಮೊದಲೇ ಗಡಿ ಭಾಗದಲ್ಲಿರುವ ತಾಲ್ಲೂಕು. ಅದು ಕೇರಳ ಮತ್ತು ತಮಿಳುನಾಡಿಗೆ ಅಡ್ಜಸ್ಟೆಂಟ್ ಆಗಿರತಕ್ಕದ್ದು. ಅಲ್ಲಿ ಬಹಳ ಅವಶ್ಯಕತೆ ಇದೆ. ಅಲ್ಲಿ ಪಟ್ಟಣ ಇನ್ನೂ ಬೆಳವಣಿಗೆಯಲ್ಲಿರುವಂಥದ್ದು. ಅಲ್ಲಿ ವೈದ್ಯರಿಗೆ ವಸತಿ ಗೃಹ ಇಲ್ಲದಿದ್ದರೆ ಅವರು ದಿನವೂ ಮೈಸೂರಿನಿಂದ ಓಡಾಡಿ ಎಷ್ಟರ ಮಟ್ಟಿಗೆ ನಮ್ಮ ರೋಗಿಗಳಿಗೆ ತಪಾಸಣೆ ಮಾಡಲು ಸಾಧ್ಯವಾಗುತ್ತದೆ?

ಡಾ|| ಎ.ಬಿ.ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೇ, ಈ ಕೆಲಸ ಪ್ರಾರಂಭವಾದದ್ದು ಐದು ವರ್ಷಗಳ ಹಿಂದೆಯಲ್ಲ. ಪ್ರಾರಂಭವಾದದ್ದು ಮಾರ್ಚ್ 1999 ಮತ್ತು ಕಬ್ಬಳ್ಳಿಯಲ್ಲಿ ಡಿಸೆಂಬರ್ 1998. ಇಲ್ಲಿ ಕೆಲಸ ಸ್ವಲ್ಪ ನಿಧಾನವಾಗಿದೆ. ಗುತ್ತಿಗೆದಾರರಿಂದ ನಿಧಾನವಾಗಿದ್ದರಿಂದ ಸ್ವಲ್ಪ ವಿಳಂಬವಾಗಿದೆ. ನಮ್ಮ ಅಧಿಕಾರಿಗಳು ಪರಿಶೀಲನೆ ಮಾಡಿದ್ದಾರೆ. ಸಮೀಕ್ಷೆ ಕೂಡ ಮಾಡಿದ್ದಾರೆ. ಮುಂದಿನ ತಿಂಗಳ ಕೊನೆಯಲ್ಲಿ ಈ ಎರಡೂ ಆಸ್ಪತ್ರೆಗಳನ್ನು ಕಂಪ್ಲೀಟ್ ಮಾಡುತ್ತಾರೆ. ಎರಡನೆಯದು ಈ ವಸತಿ ಗೃಹ ಮೊದಲು ಅಂದಾಜುಪಟ್ಟಿಯಲ್ಲಿ ಸೇರಿದ್ದು ವರ್ಲ್ಡ್ ಬ್ಯಾಂಕ್ ಅಧಿಕಾರಿಗಳೊಂದಿಗೆ ಚರ್ಚೆಯಾದ ಮೇಲೆ ಹಳೆಯ ಆಸ್ಪತ್ರೆಯನ್ನೇ ಅಲ್ಲಿ ಮಾರ್ಪಾಡು ಮಾಡಿ ಪರಿವರ್ತಿಸಿ ಇಬ್ಬರು ವೈದ್ಯರಿಗೆ ಮತ್ತು ಒಂಭತ್ತು ದಾದಿಯರಿಗೆ ಅಕಾಮಡೇಟ್ ಮಾಡುವುದಕ್ಕೆ ಅದನ್ನು ಸಜ್ಜುಗೊಳಿಸಬೇಕಾಗಿತ್ತು. ಆದರೆ ಈ ನಡುವೆ ಏನು ಮಾಡಿದ್ದೀರಿ ಎಂದರೆ ಇದು ತಮಗೆ ಗೊತ್ತಿದೆಯೋ ಇಲ್ಲವೋ ತಿಳಿಯದು. ಅಲ್ಲಿಯ ಹಳೆಯ ಆಸ್ಪತ್ರೆಯಲ್ಲಿ ಆಯುರ್ವೇದಿಕ್ ಆಸ್ಪತ್ರೆಯನ್ನು ಪ್ರಾರಂಭ ಮಾಡಿಬಿಟ್ಟಿದ್ದೀರಿ. ಆಯುರ್ವೇದಿಕ್ ಆಸ್ಪತ್ರೆಗೆ ಬೇರೆ ಕಡೆ ಅವಕಾಶ ಮಾಡಿಕೊಡುವುದಾದರೆ ಹಿಂದೆ ಇರುವ ಹಳೆಯ ಆಸ್ಪತ್ರೆಯನ್ನು ಪರಿವರ್ತನೆ ಮಾಡಿ ಮಾಡಿಕೊಡುತ್ತೇವೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮಾನ್ಯ ಅಧ್ಯಕ್ಷರೇ, ಕ್ವಾರ್ಟರ್ಸ್ ಕಟ್ಟುವುದಕ್ಕೆ ಹಳೆಯ ಆಸ್ಪತ್ರೆ ಕಟ್ಟಡದಲ್ಲಿ ಪ್ರಸ್ತಾವನೆ ಇತ್ತು. ಅಲ್ಲಿ ಆಯುರ್ವೇದಿಕ್ ಆಸ್ಪತ್ರೆಯಾಗಿರುವುದರಿಂದ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಹಳೆಯ ಆಸ್ಪತ್ರೆ ಕಟ್ಟಡದಲ್ಲಿ ಈಗಾಗಲೇ ಆಯುರ್ವೇದ ಆಸ್ಪತ್ರೆ ತಮ್ಮ ಇಲಾಖೆಯಿಂದಲೇ ಮಂಜೂರಾಗಿ ಅಲ್ಲಿಯೇ ನಡೆಸಬೇಕೆಂದು ತೀರ್ಮಾನವಾಗಿ ನಡೆಯುತ್ತಿದೆ. ಈಗ ಅದನ್ನೇ ಇನ್ನೊಂದು ಕಡೆಗೆ ಶಿಫ್ಟ್ ಮಾಡಿ ಇರುವ ಬಿಲ್ಡಿಂಗನ್ನು ರಿಪೇರಿ ಮಾಡಿಸುವ ಬದಲು ಹೊಸ ಆಸ್ಪತ್ರೆ ಕಟ್ಟಡದಲ್ಲಿ ಸಾಕಷ್ಟು ವಿಶಾಲವಾದ ಐದಾರು ಎಕರೆ ಜಾಗ ಇದೆ. ಆಸ್ಪತ್ರೆ ಪಕ್ಕದಲ್ಲೇ ಈ ಕ್ವಾರ್ಟರ್ಸ್‌ಗಳನ್ನು ಕಟ್ಟುವುದರಿಂದ ಡಾಕ್ಟರ್‌ಗಳನ್ನು ಬೇಕೆಂದಾಗ ಆಸ್ಪತ್ರೆಗೆ ಕರೆಸಿಕೊಳ್ಳುವುದಕ್ಕೆ ಅವಕಾಶ ಇದೆ. ಅದರಿಂದ ಅಲ್ಲೇ ಏಕೆ ಅವರಿಗೆ ವಸತಿಗೃಹಗಳನ್ನು ಮಾಡಬಾರದು? ಹಣದ ಕೊರತೆಯಿಂದ ಇದನ್ನು ಕೈಬಿಟ್ಟಿದ್ದೇವೆ ಎಂದು ಹೇಳಿದರೆ ಅದನ್ನು ಒಪ್ಪಿಕೊಳ್ಳೋಣ. ಅದನ್ನು ಬೇರೆ ಕಡೆಗೆ ಮಾಡುತ್ತೇವೆ ಎಂದು ಹೇಳುವುದರಿಂದ ನಮ್ಮ ತಾಲ್ಲೂಕಿಗೆ ಬಹಳ ತೊಂದರೆಯಾಗುತ್ತದೆ. ತಾಲ್ಲೂಕಿನಲ್ಲಿ ಇರುವ ರೋಗಿಗಳಿಗೂ ತೊಂದರೆಯಾಗುತ್ತದೆ. ಇಲ್ಲಿ ಸಾಕಷ್ಟು ಕೃಷಿ ಕಾರ್ಮಿಕರು ಇರುವಂಥ ತಾಲ್ಲೂಕು. ಅಲ್ಲಿಗೆ ಇದನ್ನು ದಯಮಾಡಿ ವರ್ಗಾಯಿಸಿ. ದಾದಿಯರ ಮತ್ತು ವೈದ್ಯರ ವಸತಿ ಗೃಹಗಳ ವಿಸ್ತೀರ್ಣ ಕಾರ್ಯ ಏನು ಮಾಡುತ್ತಿದ್ದೀರಿ, ಆ ಪ್ರಿಮಿಸಿಸ್‌ನಲ್ಲಿಯೇ ಮಂಜೂರಾತಿ ಮಾಡಿಕೊಡಬೇಕೆಂಬುದು ನನ್ನ ಆಗ್ರಹ. ಇನ್ನೊಂದು ರಿನೊವೇಶನ್ ವಿಚಾರ. ಹಳೆಯ ಕಟ್ಟಡವನ್ನು ವಿಸ್ತರಣ ಮಾಡಿ ಹೊಸ ಕಟ್ಟಡವನ್ನು ಕಟ್ಟುತ್ತಿದ್ದೀರಿ. ಆ ಹೊಸ ಕಟ್ಟಡಕ್ಕೆ ಒಂದು ರೀತಿಯ ಫ್ಲೋರಿಂಗ್, ಹಳೆಯ ಕಟ್ಟಡಕ್ಕೇ ಇನ್ನೊಂದು ಫ್ಲೋರಿಂಗ್. ಸಿಮೆಂಟ್ ಫ್ಲೋರಿಂಗ್, ರೆಡಾಕ್ಸ್ಲೈಡ್ ಫ್ಲೋರಿಂಗ್ ಹಳೆಯ ಕಟ್ಟಡದಲ್ಲಿ ಇದ್ದರೆ, ಹೊಸ ಕಟ್ಟಡಕ್ಕೆ ಮಸಾಯಿಕ್ ಫ್ಲೋರಿಂಗ್ ಮಾಡುತ್ತಿದ್ದೀರಿ.

ಅಧ್ಯಕ್ಷರು: ತಾವು ದಯವಿಟ್ಟು ಪ್ರಶ್ನೆ ಹೇಳಿ. ಫ್ಲೋರಿಂಗ್, ಕಲರ್, ಇವುಗಳ ವಿಷಯ ನಾವು ಇಲ್ಲಿ ಮಾತನಾಡಿಕೊಂಡು ಕೂರುವುದಕ್ಕೆ ಆಗುತ್ತದೆಯೇ? ಗ್ಲಾಸ್ ಯಾವುದು ಹಾಕಿದ್ದಾರೆ, ಕಿಟಕಿ ಯಾವುದು ಹಾಕಿದ್ದಾರೆ ಎಂದು ಹೇಳುತ್ತಾ ಹೋದರೆ ಹೇಗೆ?

ಶ್ರೀ ಹೆಚ್.ಎಸ್.ಮಹದೇಶ್ ಪ್ರಸಾದ್: ಕೆಎಚ್ಎಸ್‌ಡಿಪಿ ಅಧಿಕಾರಿಗಳಿಗೆ ನಾವು ಹತ್ತು ಸಾರಿ ಫೋನ್ ಮಾಡಿದರೂ ಸಹ ನಮಗೆ ಏತಕ್ಕೆ ಒಬ್ಬ ಎಂಎಲ್ಎ ಫೋನ್ ಮಾಡಿ ಕೇಳುತ್ತಾರೆ ಎಂದು ಕೇಳುವಷ್ಟು ಸೌಜನ್ಯ ಇಲ್ಲ. ಅಲ್ಲಿ ಹಳೆಯ ಕಟ್ಟಡಕ್ಕೆ ಒಂದು ಸಿಮೆಂಟ್ ಫ್ಲೋರಿಂಗ್ ಇದೆ, ಹೊಸ ಕಟ್ಟಡಕ್ಕೆ ಮಸಾಯಿಕ್ ಫ್ಲೋರಿಂಗ್ ಮಾಡುತ್ತಿದ್ದಾರೆ. ಅದನ್ನೂ ಮಸಾಯಿಕ್‌ನಲ್ಲಿ ಮಾಡಿ ಹೊಸ ರೀತಿಯಲ್ಲಿ ವಾತಾವರಣ ನಿರ್ಮಾಣ ಮಾಡಿ ಎಂದರೆ ಅದಕ್ಕೆ ನಿಮ್ಮ ಕೆಎಚ್ಎಸ್‌ಡಿಪಿ ಅಧಿಕಾರಿಗಳು ಸಹಕಾರ ಮಾಡದೇ ಅವರು ಹೇಳಿದ್ದೇ ಆಗುವುದಾದರೆ ನಾವು ಜನ ಪ್ರತಿನಿಧಿಗಳಾಗಿ ಏನು ಪ್ರಯೋಜನ?

ಅಧ್ಯಕ್ಷರು: ಫ್ಲೋರಿಂಗ್ ಯಾವುದು, ಕಲರ್ ಯಾವುದು ಎಂದು ಹೇಳಿ ಈ ಸಭೆಯಲ್ಲಿ ಡಿಸ್ಕಸ್ ಮಾಡುವುದಕ್ಕೆ ಆಗುತ್ತದೆಯೇ? ಸಚಿವರ ಛೇಂಬರ್ಸ್‌ಗೆ ಹೋಗಿ ಬೇಕಾದರೆ ಮಾತನಾಡಿ. ನೀವು ಸಜೆಷನ್ಸ್ ಕೊಡಿ. ಮಾನ್ಯ ಮಂತ್ರಿಗಳೇ ತಾವು ಉತ್ತರ ಕೊಡಿ, ಒಂದು ಪ್ರಶ್ನೆ ಆರು ನಿಮಿಷ ಆಯಿತು, ದಯಮಾಡಿ ಬೇಗ ಮುಗಿಸಿ.

(ಗೊಂದಲ)

ಅಧ್ಯಕ್ಷರು: ನಮ್ಮ ಮುಂದೆ ಇನ್ನೂ 12 ಪ್ರಶ್ನೆಗಳು ಇವೆ. ನಮಗೆ ಸಮಯ ಇರುವುದು ಇನ್ನು ಮುಕ್ಕಾಲು ಗಂಟೆ.

ಡಾ:ಎ.ಬಿ.ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೆ, ಇದು ವರ್ಲ್ಡ್ ಬ್ಯಾಂಕ್ ಏಡೆಡ್ ಪ್ರಾಜೆಕ್ಟ್ ಆಗಿರುವುದರಿಂದ ಪುನರ್ ಪರಿಶೀಲನೆಗೆ ಈ ಮಟ್ಟದಲ್ಲಿ ಅವಕಾಶ ಇಲ್ಲ. ಸಧ್ಯದ ಪರಿಸ್ಥಿತಿಯಲ್ಲಿ ಮುಂದಿನ ತಿಂಗಳ ಅಂತ್ಯದೊಳಗಾಗಿ ಈ ಎರಡೂ ಆಸ್ಪತ್ರೆಗಳನ್ನು ಸಜ್ಜುಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಕೊಡಲಾಗುವುದು.

ಬೈಂದೂರಿಗೆ ಸಮುದಾಯ ಆರೋಗ್ಯ ಕೇಂದ್ರ ಮಂಜೂರಾತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 19(26)

ಸದಸ್ಯರ ಹೆಸರು: ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು)

ಉತ್ತರಿಸುವ ಸಚಿವರು: ಡಾ।ಎ.ಬಿ. ಮಾಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) 1994-95ನೇ ಇಸವಿಯಲ್ಲಿ ಬೈಂದೂರಿಗೆ ಸಮುದಾಯ ಆರೋಗ್ಯ ಕೇಂದ್ರ ಮಂಜೂರು ಆಗಿರುವುದು ನಿಜವಲ್ಲವೆ?

ಆ) ಹಾಗಿದ್ದಲ್ಲಿ, ಅವುಗಳು ಕಾರ್ಯರೂಪಕ್ಕೆ ಬರದಿರಲು ಕಾರಣವೇನು?

ಇ) ಈ ಸಾಲಿನಲ್ಲಾದರೂ ಸಮುದಾಯ ಆರೋಗ್ಯ ಕೇಂದ್ರ ಸ್ಥಾಪಿಸುವ ವಿಚಾರ ಸರ್ಕಾರದ ಮುಂದಿದೆಯೆ?